	ಬಾವಿಗಳು	ಫಲಾನುಭವಿಗಳು
ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ	26	26
ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	6	6
ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ	6	6
	38	38

ಆ) ಕೊಳವೆ ಬಾವಿ ಮೂಲಕ ನೀರಾವರಿ ಒದಗಿಸಿದ ಜಮೀನಿನ ವಿವರ ಕೆಳಕಂಡಂತೆ ಇದೆ.ರ

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ	76.94 ಎಕರೆ
ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	16.90 ಎಕರೆ
ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ	20.12 ಎಕರೆ

...

372 (134) : ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಟ್ಲ ನಗರದಲ್ಲಿನ ಆಸ್ಪತ್ರೆಯನ್ನು ಎಷ್ಟು ಹಾಸಿಗೆಯ ಆಸ್ಪತ್ರೆಗಳನ್ನಾಗಿ ನಿರ್ಮಿಸಲಾಗಿದೆ ಹಾಗೂ ಯಾವ ಯಾವ ಸೌಲಭ್ಯಗಳೊಂದಿಗೆ ಸಜ್ಜುಗೊಳಿಸಲಾಗಿದೆ;

ಆ) ಈ ಆಸ್ಪತ್ರೆಯಲ್ಲಿನ ಹಾಸಿಗೆ ಸಂಖ್ಯೆಯನ್ನು ಅನುಸರಿಸಿ ಆರೋಗ್ಯ ತಜ್ಞರು, ವೈದ್ಯರು ಮತ್ತು ಸಿಬ್ಬಂದಿ ವರ್ಗದವರನ್ನು ನೇಮಿಸಲಾಗಿದೆಯೇ ಹಾಗೂ ಖಾಲಿ ಇರುವ ಸಿಬ್ಬಂದಿ ವರ್ಗಗಳ ಸಂಖ್ಯೆ ಎಷ್ಟು; (ವಿವರಗಳನ್ನು ಒದಗಿಸುವುದು);

ಇ) ಕರ್ನಾಟಕ ಆರೋಗ್ಯ ವ್ಯವಸ್ಥೆಯ ಅಭಿವೃದ್ಧಿ ಯೋಜನೆಯಡಿ ಈ ಆಸ್ಪತ್ರೆಯನ್ನು ಅಭಿವೃದ್ಧಿಪಡಿಸಲಾಗಿದೆಯೇ;

ಈ) ಇಲ್ಲವಾದಲ್ಲಿ, ಆ ಯೋಜನೆಯಡಿ ಅಭಿವೃದ್ಧಿ ಪಡಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ವಿಟ್ಲ ನಗರದಲ್ಲಿನ ಆಸ್ಪತ್ರೆಯನ್ನು 30 ಹಾಸಿಗೆಯ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಸರ್ಕಾರಿ ಆದೇಶವಾಗಿದೆ. ಇದಕ್ಕೆ ಅನುಸಾರವಾಗಿ ಕಟ್ಟಡ ನಿರ್ಮಾಣವಾಗಿಲ್ಲ. ಪ್ರಸ್ತುತ ಹಳೆಯ ಪ್ರಾಥಮಿಕ ಆರೋಗ್ಯ ಕೇಂದ್ರದ ಸೌಲಭ್ಯಗಳೇ ಲಭ್ಯವಿವೆ.

ಆ) ಪ್ರಸ್ತುತ ಪ್ರಾ.ಆ. ಕೇಂದ್ರದ ಹಾಸಿಗೆ ಸಂಖ್ಯೆಯನ್ನು ಅನುಸರಿಸಿ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಹುದ್ದೆವಾರು ಸಂಖ್ಯೆ ಈ ಕೆಳಕಂಡಂತೆ ಇದೆ:–

ಕ್ರ.ಸಂ.	ಹುದ್ದೆ	ಮಂಜೂರು	ಕಾರ್ಯನಿರತ	ಖಾಲಿ
1.	ವೈದ್ಯಾಧಿಕಾರಿಗಳು	2	2	–
2.	ಕಿ.ಆ.ಸ. (ಮ)	9	8	1
3.	ಹಿ.ಆ.ಸ. (ಮ)	1	1	–
4.	ಕಿ.ಆ.ಸ. (ಪು)	5	3	2
5.	ಹಿ.ಆ.ಸ. (ಪು)	1	1	–
6.	ಪ್ರ.ದ.ಸ	1	–	1
7.	ದ್ವಿ.ದ.ಸ.	1	1	–
8.	ಫಾರ್ಮಾಸಿಸ್ಟ್	1	–	1
9.	ವಾಹನಚಾಲಕರು	1	1	–
10.	ಕ್ಷೇತ್ರ ಆರೋಗ್ಯ ಶಿಕ್ಷಕರು	1	–	1
11.	ಗ್ರೂಪ್ ಡಿ	2	2	–

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

...

373 (516) : ಶ್ರೀ ಪಾಟೀಲ್ ಸಿ.ಸಿ. (ನರಗುಂದ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಪ್ರಸ್ತಾಪ ಯಾವ ಹಂತದಲ್ಲಿದೆ;

ಆ) ಸದರಿ ಪ್ರಸ್ತಾಪವು ವಿಳಂಬವಾಗುತ್ತಿರಲು ಕಾರಣಗಳೇನು;

ಇ) ಇದಕ್ಕಾಗಿ ಬಜೆಟ್‌ನಲ್ಲಿ ಅನುದಾನವನ್ನೇನಾದರೂ ನಿಗದಿಪಡಿಸಲಾಗಿದೆಯೆ; ಹಾಗೂ ಯಾವಾಗ ಮತ್ತು ಎಲ್ಲಿ ಸದರಿ ಪೀಠವನ್ನು ತೆರೆಯಲಾಗುವುದು.

ಈ) ಈ ನಿಟ್ಟಿನಲ್ಲಿ ಸರ್ಕಾರದ ನಿಲುವೇನು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಕುರಿತಂತೆ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಂದ ಸ್ಥಳ ನಿಗದಿ ಕುರಿತಂತೆ ಪ್ರಸ್ತಾವನೆ ನಿರೀಕ್ಷಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.